ಅರ್ಥವೂ, ಮಾತನಾಡಬೇಕು ಎಂದು ಮನದಿಂದ ಹೊಮ್ಮುವ ಇಚ್ಛೆಯೂ ಅವನೇ ಆಗಿದ್ದಾನೆ.

ಇಂಥ ರುದ್ರನ ದರ್ಶನ ಪಡೆದ (ದ್ರಷ್ಟಾರ) ಋಷಿ ತಾನು ಕಂಡ ರೂಪವನ್ನು ಸೂರ್ಯನಿಗೆ ಹೋಲಿಸುತ್ತಾನೆ. ಎಷ್ಟಾದರೂ ಸೂರ್ಯ ಜಗತ್ತಿಗೆ ಸಾಕ್ಷಿದೇವತೆ. ಉಚ್ಚ–ನೀಚ, ಬಡವ–ಶ್ರೀಮಂತನೆಂಬ ಭೇದವಿಲ್ಲದೆ ಎಲ್ಲರಿಗೂ ಸುಲಭವಾಗಿ ದಕ್ಕುವ, ದರ್ಶನಕೊಡುವ ದೇವತೆ. ರುದ್ರನೆಂಬ ದೇವನೂ ಹೀಗೆಯೇ ಎಲ್ಲರಿಗೂ ಸುಲಭ ಸಾಧ್ಯ. ಭಕ್ತಿಯನ್ನು ಹೊರತುಪಡಿಸಿ ಬೇರೆ ಮಾನದಂಡದಿಂದಲೂ ಅವನು ಜೀವರನ್ನು ಅಳೆಯುವುದಿಲ್ಲ. ಜಗತ್ತಿನ ತಂದೆಯೂ–ತಾಯಿಯೂ ಆಗಿರುವವನಿಗೆ ಮಕ್ಕಳಲ್ಲಿ ಭೇದವೇ?

ರುದ್ರದ ಕೆಲ ಮಂತ್ರಗಳಲ್ಲಿ 'ಹರಿಕೇಶ' (ಹಸಿರು ಕೂದಲು) ಎಂಬ ಪ್ರಯೋಗವಿದೆ. ಸಸ್ಯಗಳಿಗೆ ಎಲೆಗಳು ಎಷ್ಟು ಮುಖ್ಯ ಎಂಬುದು ಸಸ್ಯಶಾಸ್ತ್ರದ ಪ್ರಾಥಮಿಕ ಜ್ಞಾನವಿದ್ದವರಿಗೂ ಗೊತ್ತು. ಅದೇ ರೀತಿ ಜೀವಂತಿಕೆಯನ್ನು ಹಸಿರಿನಿಂದಲೇ ಬಿಂಬಿಸುವ ಕ್ರಮವೂ ರೂಢಿಯಲ್ಲಿದೆ. ಈ ನಿಟ್ಟಿನಿಂದ ನೋಡಿದರೆ ಪ್ರಕೃತಿಯ ಮತ್ತು ಜೀವಂತಿಕೆಯ ಸಾರಸರ್ವಸ್ವವೂ ರುದ್ರನೇ ಎಂಬ ಭಾವನೆ ಸ್ಫುರಿಸುತ್ತದೆ. ಸಂಸಾರವನ್ನು ಮರಕ್ಕೆ ಹೋಲಿಸುವುದು ವಾಡಿಕೆ. ಅದನ್ನು ಅನ್ವಯಿಸಿ ನೋಡಿ, ನಮ್ಮ ಜೀವನದ ಸೂತ್ರ ಹಿಡಿದವನೂ ರುದ್ರನೇ ಆಗಿದ್ದಾನೆ ಅನ್ನಿಸಿತೆ?

ಕೇವಲ ಹಸಿರು ಮಾತ್ರವಲ್ಲ, ಅದನ್ನು ಆಧರಿಸಿರುವ ಸಮಸ್ತ ಜೀವರಾಶಿಗಳನ್ನೂ ರುದ್ರ ಆವರಿಸಿದ್ದಾನೆ. ಹಸುವಾಗಿ ಹುಲ್ಲು ಮೇಯುತ್ತಾನೆ, ಹಾಲಾಗಿ ಕರುವಿನ ಹೊಟ್ಟೆ ತುಂಬಿಸುತ್ತಾನೆ. ನೀರಾವಿಯಾಗಿ ಭೂಮಿಯಿಂದ ಮೇಲೇರುತ್ತಾನೆ, ಮೋಡವಾಗಿ ಘನೀಭವಿಸುತ್ತಾನೆ, ಮಳೆಯಾಗಿ ಕೆರೆಕುಂಟೆಗಳಿಗೆ ಇಳಿಯುತ್ತಾನೆ, ನದಿಯಾಗಿ ಹರಿಯುತ್ತಾನೆ, ಸಾಗರದಲ್ಲಿ ಶಾಂತನಾಗುತ್ತಾನೆ. ನೀರನ್ನು ಹಿಡಿದಿಡುವ ಕೆರೆ, ಕುಂಟೆ, ನದಿ, ಸಾಗರಗಳು ಮತ್ತು ಅದರಲ್ಲಿರುವ ನೀರು ಸಹ




ಎಚ್.ಎಲ್.ಲಕ್ಷ್ಮೀನರಸಿಂಹಶಾಸ್ತ್ರಿ ಅವರ ರುದ್ರಭಾಷ್ಯ ಪ್ರಕಾಶ.

ಅವನೇ ಆಗಿದ್ದಾನೆ. ಪ್ರಕೃತಿ ಮತ್ತು ಜೀವಸೃಷ್ಟಿಯ ಆಧಾರ ಎನಿಸಿರುವ ಹಸಿರು ಮತ್ತು ನೀರನ್ನು ಅನ್ವಯಿಸಿ ರುದ್ರನನ್ನು ಉಪಾಸನೆಯನ್ನು ರುದ್ರಸೂಕ್ತ ಸಾರಿ ಹೇಳುತ್ತದೆ.

## ನೀನಲ್ಲದವ ಯಾರು ಸ್ವಾಮಿ?

ದೇವರನ್ನು ಕಂಡ ಯಾರೋ ಒಬ್ಬರು, ಮತ್ತೊಬ್ಬರಿಗೆ ಹೇಳಿದ ವರದಿಯಲ್ಲ ರುದ್ರಸೂಕ್ತ. ದೇವರು ಎದುರು ನಿಂತಾಗ ಅದನ್ನು ಕಂಡವನ ಭಾವನೆಗಳು ಹೊಮ್ಮಿಸಿದ ಶಬ್ದಗಳ ಮೊತ್ತವಿದು. ಹೀಗಾಗಿಯೇ 'ಇಲ್ಲಿದ್ದಾನೆ ದೇವರು, ಹೀಗಿದ್ದಾನೆ ದೇವರು' ಎನ್ನುವ ಇದಮಿತ್ಥಂ ಎನ್ನುವ ಖಚಿತ ನಿಲುವಿನ, ಐವ್ ರಿಪೋರ್ಟಿಂಗ್‌ನಂಥ ಗಟ್ಟಿ ಸಾಲುಗಳು ಇಲ್ಲಿವೆ.

'ನೀವು ಪ್ರತ್ಯಕ್ಷ ಕಂಡು ಬರುತ್ತಿದ್ದೀರಿ, ನಿಮಗೆ ನಮಸ್ಕಾರವು' ಎಂಬ ಸಾಲೊಂದು ರುದ್ರದಲ್ಲಿದೆ. ಈ ಸಾಲಿನಲ್ಲಿರುವ 'ನೀವು' ಎಂಬುದು ವಿಸ್ತಾರವಾಗುತ್ತಾ ಆಗುತ್ತಾ... 'ಕುಳಿತಿರುವವರು, ನಿಂತಿರುವವರು, ಮಲಗಿರುವವರು, ಎಚ್ಚೆತ್ತಿರುವವರು, ಓಡುತ್ತಿರುವವರು, ಸಭಿಕರು, ಸಭಾಧ್ಯಕ್ಷರು, ದೇವರ ವಿಚಾರದಲ್ಲಿ ಆಸಕ್ತರಾದವರು, ನಿರಾಸಕ್ತರು, ಆಸೆಗೆದ್ದವರು, ಆಸೆಗೆ ಶರಣಾದವರು, ವಿರೂಪರು, ಸುಂದರಾಂಗರು, ಜನರು, ಜನಪ್ರತಿನಿಧಿಗಳು...' ಎಂದೆಲ್ಲಾ ಮುಂದುವರಿಯುತ್ತದೆ.

ಒಂದು ಹಂತದಲ್ಲಿಯಂತೂ 'ನಾಯಿಗಳಿಗೂ, ನಾಯಿಗಳನ್ನು ಹಿಡಿದುಕೊಂಡವರಿಗೂ, ನಾಯಿಗಳ ಒಡೆಯರಿಗೂ, ನಾಯಿಯನ್ನು ಬೇಯಿಸಿ ತಿನ್ನುವವರಿಗೂ, ಕಳ್ಳರಿಗೂ, ಕಳ್ಳರ ನಾಯಕರಿಗೂ ನಮಸ್ಕಾರ' ಎನ್ನುವ ಮೂಲಕ ಸಮಾಜದಲ್ಲಿ ಕಂಡುಬರುವ ಉಚ್ಚ–ನೀಚ ಭಾವನೆಗಳನ್ನು ಸಾರಾಸಗಟಾಗಿ ನಿರಾಕರಿಸಿ, 'ಎಲ್ಲವೂ ದೇವನೇ ಆಗಿದ್ದಾನೆ ಎನ್ನುವ ಎಚ್ಚರ ಮೂಡಿಸಿಕೊ ಸಾಧಕನೇ' ಎಂದು ಪ್ರೀತಿಯ ಕಿವಿಮಾತು ಹೇಳುತ್ತದೆ.

ಭೂಮಿಯನ್ನು ಮತ್ತು ಸಹಜೀವಿಗಳನ್ನು ನಿನ್ನಂತೆಯೇ ಕಾಣು, ಪ್ರಕೃತಿಯನ್ನು ಗೌರವಿಸು. ಮನುಷ್ಯರ ಜೊತೆಗೆ ಭೂಮಂಡಲದಲ್ಲಿರುವ ಎಲ್ಲ ಜೀವಿಗಳನ್ನೂ ಪ್ರೀತಿಸು. ಇಲ್ಲದಿದ್ದರೆ ಹರ ಮುನಿದಾನು. ಮುನಿದ ಶಿವನು ಯಾರನ್ನೂ–ಯಾವುದನ್ನೂ ಉಳಿಸುವುದಿಲ್ಲ. ಆದರೆ ಅವನು ಒಲಿದು ಮಂಗಳನಾದರೆ ನಿನ್ನನ್ನು–ನಿನ್ನ ಸಂತಾನವನ್ನೂ ಕಾಪಾಡುವ ಭರವಸೆಯಾಗುತ್ತಾನೆ. 'ರುದ್ರನನ್ನು ಶಿವನನ್ನಾಗಿ, ಮಂಗಳಕರನನ್ನಾಗಿ ಮಾಡಿಕೊ' ಎನ್ನುವುದು ಒಟ್ಟಾರೆಯಾಗಿ ರುದ್ರಸೂಕ್ತದ ಮೂಲಕ ಋಷಿಗಳು ಮನಗಾಣಿಸಲು ಯತ್ನಿಸುವ ವಿಚಾರ.

ರುದ್ರಸೂಕ್ತದ ಪಾರಾಯಣ ಕೇಳುವಾಗ ಕೆಲವರಿಗೆ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಸಾಲುಗಳು ನೆನಪಾಗುತ್ತವೆ.

'ಇಲ್ಲಿ ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ, ಯಾವುದೂ ಯಃಕಶ್ಚಿತವಲ್ಲ! ಇಲ್ಲಿ ಯಾವುದಕ್ಕೂ ಮೊದಲಿಲ್ಲ, ಯಾವುದಕ್ಕೂ ತುದಿಯಿಲ್ಲ...' ಎನ್ನುವ ಮೂಲಕ ಕುವೆಂಪು ಹೇಳುವುದು ಸಹ ಇದನ್ನೇ ಅಲ್ಲವೇ? ರುದ್ರಸೂಕ್ತದ ತಾತ್ಪರ್ಯ ಅರ್ಥ ಮಾಡಿಕೊಳ್ಳಲು, ಮನನ ಮಾಡಿಕೊಳ್ಳಲು ಈ ಸುಂದರ ಸಾಲುಗಳು ನೆರವಿಗೆ ಒದಗುತ್ತವೆ. ಈ ಸಲ ಶಿವರಾತ್ರಿಯಂದು ಯಾಮ ಪೂಜೆಯ ಅಭಿಷೇಕ ವೇಳೆ ರುದ್ರಸೂಕ್ತ ಪಾರಾಯಣ ಮಾಡುತ್ತಿದ್ದುದು ನಿಮ್ಮ ಕಿವಿಗೆ ಬಿದ್ದಾಗ ಅರ್ಥಾನುಸಂಧಾನದ ಕಡೆಗೂ ನಮ್ಮ ಚಿತ್ತ ಹರಿಯಲಿ. ಮಂತ್ರಗಳು ಸೃಷ್ಟಿಸುವ ನಾದದ ಆವರಣ ಮನಸ್ಸಿನ ಮೇಲೆ ಅಚ್ಚೊತ್ತುವ ಸುಖ–ಸೌಂದರ್ಯವನ್ನು ಬರೆದು ವಿವರಿಸಲು ಸಾಧ್ಯವೇ? ಅದನ್ನು ಅನುಭವಿಸಿಯೇ ಆಸ್ವಾದಿಸಬೇಕು.

## ನಮಕ–ಚಮಕ ತಿಳಿಯಬೇಕೆ?

ವೇದವನ್ನು ಗುರುಮುಖೇನ ಕಲಿಯುವುದು ಅತ್ಯುತ್ತಮ ಕ್ರಮ. ನಾವು ಇರುವ ಊರಿನಲ್ಲಿ ವೇದಪಾಠ ಮಾಡುವ ಗುರುಗಳು ಲಭ್ಯರಿಲ್ಲ ಎನ್ನುವವರಿಗೆ ಈಗ ತಂತ್ರಜ್ಞಾನದ ನೆರವು ಲಭ್ಯ.

ರುದ್ರ ಪಾರಾಯಣ ಮಾಡಲಿಚ್ಛಿಸುವವರು mantradeepika ಆ್ಯಪ್‌ನಲ್ಲಿರುವ 'ಶ್ರೀ ರುದ್ರಪ್ರಶ್ನಃ' ಮತ್ತು 'ಚಮಕಪ್ರಶ್ನಃ' ಗಮನಿಸಬಹುದು. archive.org ವೆಬ್‌ಸೈಟ್‌ನಲ್ಲಿ ರಾಮಕೃಷ್ಣಾಶ್ರಮದ ಸ್ವಾಮಿ ಚಿದಾನಂದರು ಸಂಪಾದಿಸಿರುವ 'ಸಸ್ವರ ವೇದಮಂತ್ರಾಃ' ಪುಸ್ತಕ ಉಚಿತ ಲಭ್ಯ.

ಉದಾತ್ತ, ಅನುದಾತ್ತ, ಸ್ವರಿತದಂಥ ವೇದಮಂತ್ರಗಳ ಉಚ್ಚಾರಣಾ ಕ್ರಮಗಳನ್ನು ಅರಿತುಕೊಳ್ಳಲು ಇಚ್ಛಿಸುವವರಿಗೆ 'ಚಳ್ಳಕೆರೆ ಸೋದರರು' ಎಂದೇ ಖ್ಯಾತರಾದ ಎಂ.ಎಸ್.ವೇಣುಗೋಪಾಲ್ ಮತ್ತು ಎಂ.ಎಸ್.ಶ್ರೀನಿವಾಸನ್ ಅವರ 'ಪರಾತ್ಪರ ಪರಮೇಶ್ವರ' ಆಲ್ಬಂ ಸಹಾಯಕ್ಕೆ ಬರುತ್ತದೆ. ಇದು ಯೂಟ್ಯೂಬ್‌ನಲ್ಲಿದೆ.

ರುದ್ರದ ಪಠ್ಯ, ಉಚ್ಚಾರಣೆ ಧಾಟಿಯನ್ನು ತಿಳಿದ ನಂತರ ಅರ್ಥಾನುಸಂಧಾನದತ್ತ ಗಮನ ಹರಿಯದಿದ್ದರೆ ಏನು ಪ್ರಯೋಜನ? ಇಂಥವರು ಎಚ್.ಎಸ್.ಲಕ್ಷ್ಮೀನರಸಿಂಹಮೂರ್ತಿಗಳ 'ರುದ್ರಭಾಷ್ಯಪ್ರಕಾಶ' ಮತ್ತು 'ಚಮಕಾಧ್ಯಾಯಭಾಷ್ಯ' ಪುಸ್ತಕಗಳನ್ನು ಗಮನಿಸಬಹುದು. ಈ ಎರಡೂ ಪುಸ್ತಕಗಳು adhyatmaprakasha.org ವೆಬ್‌ಸೈಟ್‌ನಲ್ಲಿ ಪಿಡಿಎಫ್ ರೂಪದಲ್ಲಿವೆ. ರುದ್ರ ಮತ್ತು ಚಮಕಗಳ ಬಗ್ಗೆ ಇರುವ ಹಲವು ಭಾಷ್ಯಗಳನ್ನು ಸಮಕಾಲೀನ ಸಂದರ್ಭಗಳಿಗೆ ಒಗ್ಗಿಸಿ, ಸರಳವಾಗಿ ಕಟ್ಟಿಕೊಡುವುದು ಈ ಪುಸ್ತಕಗಳ ವೈಶಿಷ್ಟ್ಯ.